**<u>ಮುಖ್ಯ ನ್ಯಾಯಾಧೀಶರು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.</u>**

**<u>ಎಂ.ವಿ.ಸಿ. ಸಂಖ್ಯೆ: 2855/2025</u>**

**PW-1**

| | |
|---|---|
| ಹೆಸರು | ಅಂಬಿಕಾ |
| ಗಂಡನ ಹೆಸರು | ಲೇಟ್.ಶಿವಣ್ಣ |
| ವಯಸ್ಸು | **37** ವರ್ಷ |
| ವೃತ್ತಿ | ಗೃಹಿಣಿ |
| ವಿಳಾಸ | ಕಡೂರು, ಚಿಕ್ಕಮಗಳೂರು |

**<u>ದಿನಾಂಕ: 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:</u>**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ಬದಲಾಗಿ, ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ನನ್ನ ವಕೀಲರು ಸಿದ್ಧಪಡಿಸಿದ್ದಾರೆ.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊಕದ್ದಮೆ ನಂ: **32/2025** ರಲ್ಲಿ ದಾಖಲಾಗಿರುವ ಪ್ರಥಮ ವರ್ತಮಾನ ವರದಿಯ ಧೃಡೀಕೃತ ನಕಲನ್ನು

ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, ದೂರಿನ ಧೃಡೀಕೃತ ನಕಲನ್ನು ನಿ.ಪಿ.**2** ಎಂದು, ಶವ ತನಿಖಾ ವರದಿಯ ಧೃಡೀಕೃತ ನಕಲನ್ನು ನಿ.ಪಿ.**3** ಎಂದು, ಸ್ಥಳ ಪಂಚನಾಮೆಯ ಧೃಡೀಕೃತ ನಕಲನ್ನು ನಿ.ಪಿ.**4** ಎಂದು, ವಾಹನ ಪರಿಶೀಲನಾ ಪಂಚನಾಮೆಯ ಧೃಡೀಕೃತ ನಕಲನ್ನು ನಿ.ಪಿ.**5** ಎಂದು, ಶವ ಪರೀಕ್ಷಾ ವರದಿಯ ಧೃಡೀಕೃತ ನಕಲನ್ನು ನಿ.ಪಿ.**6**, ಐಎಂವಿ ವರದಿಯ ಧೃಡೀಕೃತ ನಕಲನ್ನು ನಿ.ಪಿ.**7** ಎಂದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಸಲ್ಲಿಸಿರುವ ಅಂತಿಮ ವರದಿಯ ಧೃಡೀಕೃತ ನಕಲನ್ನು ನಿ.ಪಿ.**8** ಎಂದು ಗುರುತಿಸಿದ್ದೇನೆ.

3) ನನ್ನ ಗಂಡ ಲೇಟ್ ಶಿವಣ್ಣ ರವರ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**9** ಎಂದು, ನನ್ನ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**10** ಎಂದು, ನನ್ನ ದೊಡ್ಡ ಮಗ ಮಾದೇಶ ನ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**11** ಎಂದು, ನನ್ನ ಚಿಕ್ಕ ಮಗ ಕಿಶೋರ ನ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**12** ಎಂದು ಗುರುತಿಸಿದ್ದೇನೆ. **(ಸಾಕ್ಷಿಯು ನಿ.ಪಿ.9 ರಿಂದ 12 ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಟರೀಕೃತ ನಕಲುಗಳೊಂದಿಗೆ ಹೋಲಿಸಿದ ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ).**

4) ನನ್ನ ಇಬ್ಬರು ಗಂಡು ಮಕ್ಕಳು ಅಂಗವಿಕಲರಾಗಿದ್ದು ಆ ಬಗ್ಗೆ ಅಂಗವಿಕಲತೆಯ ಎರಡು ಗುರುತಿನ ಕಾರ್ಡ್ ಗಳ ನೋಟರೀಕೃತ

ನಕಲುಗಳನ್ನು ನಿ.ಪಿ.**13** ಮತ್ತು ನಿ.ಪಿ.**14** ಎಂದು ಗುರುತಿಸಿದ್ದೇನೆ. **(**ಸಾಕ್ಷಿಯು ನಿ.ಪಿ.**13** ಮತ್ತು **14** ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಟರೀಕೃತ ನಕಲುಗಳೊಂದಿಗೆ ಹೋಲಿಸಿದ ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ**).**

5) ಆದ್ದರಿಂದ ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರವನ್ನು ನೀಡಬೇಕಾಗಿ ಪ್ರಾರ್ಥನೆ.

ಪಾಟೀ **ಸವಾಲುಃ 1 ಮತ್ತು 2ನೇ ಎದುರುದಾರರು ಮತ್ತು ಅವರ ಪರ ವಕೀಲರುಗಳು ಗೈರು ಹಾಜರಿದ್ದಾರೆ. ನ್ಯಾಯ ಹಿತರಕ್ಷಣೆಯ ದೃಷ್ಟಿಯಿಂದ** ಪಾಟೀ **ಸವಾಲಿಗಾಗಿ ಮುಂದೂಡಲಾಗಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.